**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ ::447/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಕನಕರಾಜು | **PW**-07 |
| **ತಂದೆಯ ಹೆಸರು** | : | ಕಣ್ಣಪ್ಪ | **CW**-15 |
| **ವಯಸ್ಸು** | : | 51 ವರ್ಷ | |
| **ಉದ್ಯೋಗ** | : | ಚಾಲಕ ವೃತ್ತಿ, | |
| **ವಾಸಸ್ಥಳ** | : | ಕಾಂಚೀ ನಗರ, ಶೃಂಗೇರಿ. | |

**ದಿನಾಂಕಃ08-11-2024 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

1. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿತರ ವಿರುದ್ಧ ಈ ಪ್ರಕರಣ ಏಕೆ ದಾಖಲಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**::ಪಾಟೀಸವಾಲು :: ಮಾನ್ಯ A P P ರವರಿಂದ ::**

1. ನಾನು ಈ ಹಿಂದೆ ಕಲ್ಲು ಒಡೆಯುವ ಪರವಾನಗಿ ಹೊಂದಿದ್ದು, ಹೊಳೆಕೊಪ್ಪದ ಹತ್ತಿರ ಕಲ್ಲು ಬಂಡೆಯನ್ನು ವಹಿಸಿಕೊಂಡು ಕಲ್ಲು ಒಡೆಯುವ ಕೆಲಸ ಮಾಡುತ್ತಿದ್ದೆ, ಆಗ ನನಗೆ ಸ್ಫೋಟಕಗಳನ್ನು ತಮಿಳುನಾಡು ಮೂಲದ ಬಾಳೆಹೊನ್ನೂರುನಲ್ಲಿ ವಾಸವಾಗಿರುವ ಸ್ಫೋಟಕ ಬಳಸಲು ಪರವಾನಗಿ ಹೊಂದಿರುವ 4 ನೇ ಆರೋಪಿ ರವರು ಅವರ ಬಾಬ್ತು ಕಂಪ್ರೆಸರ್ ಟ್ರಾಕ್ಟರ್ ಮತ್ತು ಸ್ಫೋಟಕಗಳೊಂದಿಗೆ ಬಂದು, ಕಲ್ಲುಗಳಲ್ಲಿ ಕುಳಿಗಳನ್ನು ತೆಗೆದು ಸ್ಫೋಟಕಗಳನ್ನು ಇಟ್ಟು ಬಂಡೆ ಒಡೆದು ಕೊಡುತ್ತಿದ್ದರು ನಂತರ ನಾನು ಕೆಲಸವನ್ನು ಬಿಟ್ಟು 2018 ನೇ ಸಾಲಿನಲ್ಲಿ ಶೃಂಗೇರಿಯ ಚಾಸಾ-16 ರವರು ಹೊಸದಾಗಿ ಲೇ ಔಟ್ ನಿರ್ವಹಿಸುತ್ತಿದ್ದು ಅಲ್ಲಿ ನಾನು ಕೆಲಸ ಮಾಡುತ್ತಿದ್ದು, ನಾನು ಸದರಿ ಚಾಸಾ-16 ರವರಿಗೆ 3 ನೇ ಆರೋಪಿಯನ್ನು ಪರಿಚಯ ಮಾಡಿಕೊಟ್ಟಿದ್ದು, ನಂತರ ಅವರ ವಿರುದ್ಧ ಈ ಪ್ರಕರಣ

ದಾಖಲಾಗಿರುತ್ತದೆ ಎಂದು ಈಗ ನನಗೆ ಓದಿ ಹೇಳಿದಂತೆ ನಿಪಿ-18 ರಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.